ಕರ್ನಾಟಕ ಸರ್ಕಾರ

# ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 012. ದೂರವಾಣಿ: 080-23 460 460 (5 ಲೈನ್‌ಗಳು)
ಫ್ಯಾಕ್ಸ್: 080-23461576 ಇ-ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಪಿ.ಆರ್-18/2020-21 ದಿನಾಂಕ:30-08-2021

## ಡಿಪ್ಲೊಮಾ ಧಾರಕರಿಗೆ 2021-22 ನೇ ಸಾಲಿನ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ಡಿಪ್ಲೊಮ ಸಾಮಾನ್ಯ ಪ್ರವೇಶ ಪರೀಕ್ಷೆ

ಸರ್ಕಾರವು ತನ್ನ ಆದೇಶ ಸಂಖ್ಯೆ ED 59 TEC 2012 ದಿನಾಂಕ: 26-05-2012 ಮತ್ತು 21-06-2012 ರಲ್ಲಿ, 2012-13ನೇ ಸಾಲಿನಿಂದ ಡಿಪ್ಲೊಮಾ ಧಾರಕರಿಗೆ ಲ್ಯಾಟರಲ್ ಪ್ರವೇಶ ಯೋಜನೆಯಡಿಯಲ್ಲಿ, ಹಗಲು ಮತ್ತು ಸಂಜೆ ಇಂಜಿನಿಯರಿಂಗ್ ಕಾಲೇಜುಗಳಿಗೆ 2ನೇ ವರ್ಷದ ಅಥವಾ 3ನೇ ಸೆಮಿಸ್ಟರ್‌ನ ಇಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಲು ಹಾಗು ಆದೇಶ ಸಂಖ್ಯೆ ಇಡಿ 23 ಟಿಪಿಇ 2018 ಬೆಂಗಳೂರು ದಿನಾಂಕ 03-04-2018 ರಲ್ಲಿ ಫಲಿತಾಂಶ ಆಧಾರಿತ ಪಠ್ಯಕ್ರಮ ಪದ್ಧತಿಯನುಸಾರ ಹೊಸ ಪಠ್ಯಕ್ರಮಗಳನ್ನು ಅಳವಡಿಸಿಕೊಂಡು, ಡಿಪ್ಲೊಮಾ ಸಿಇಟಿ ಅನ್ನು ನಡೆಸಲು ಅನುಮೋದನೆ ನೀಡಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಆದೇಶಿಸಿದೆ. ಅಭ್ಯರ್ಥಿಗಳ ಮಾಹಿತಿಗಾಗಿ ಸದರಿ ಪಠ್ಯಕ್ರಮವನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.

ಅಭ್ಯರ್ಥಿಗಳು, ಈ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆ ಪಡೆಯಲು, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ 2021ರ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕು. ವಾಸ್ತುಶಿಲ್ಪ (Architecture) ಪ್ರವೇಶಕ್ಕೆ Council of Architecture ನವರು ನಡೆಸಿದ NATA ಪರೀಕ್ಷೆಗೆ ಹಾಜರಾಗಿ valid NATA score ಅನ್ನು ಹೊಂದಿರಬೇಕು ಮತ್ತು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರಬೇಕು.

**ಶೈಕ್ಷಣಿಕ ವಿದ್ಯಾರ್ಹತೆ:** ಮೇಲಿನ ಎಲ್ಲಾ ಕೋರ್ಸ್‌ಗಳ ಪ್ರವೇಶಕ್ಕೆ ವಿವರವಾದ ಅರ್ಹತೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಕಟಿಸಲಾಗಿದೆ. ಅಭ್ಯರ್ಥಿಗಳು, ಯಾವುದೇ ಕೋರ್ಸಿಗೆ ಅರ್ಜಿ ಸಲ್ಲಿಸುವ ಮೊದಲು ಅರ್ಹತಾ ವಿವರವನ್ನು ಪರಿಶೀಲಿಸಲು ಕೋರಲಾಗಿದೆ.

| | |
|---|---|
| ವೆಬ್‌ಸೈಟಿನಲ್ಲಿ ಡಿಸಿಇಟಿ-2021 ಮಾಹಿತಿ ಪುಸ್ತಕ ಪ್ರಕಟಣೆ | **31-08-2021 ಮಧ್ಯಾಹ್ನ 2.00** |
| ಆನ್‌ಲೈನ್ ಮುಖಾಂತರ ಅರ್ಜಿ ಭರ್ತಿ ಮಾಡಲು ಪ್ರಾರಂಭಿಕ ದಿನಾಂಕ | **31-08-2021 ಮಧ್ಯಾಹ್ನ 3.00 ರಿಂದ** |
| ಆನ್‌ಲೈನ್ ಮುಖಾಂತರ ಅರ್ಜಿ ಭರ್ತಿ ಮಾಡಲು ಕೊನೆಯ ದಿನಾಂಕ | **13-09-2021 ಸಂಜೆ 5.30 ರ ವರೆಗೆ** |
| ಬ್ಯಾಂಕುಗಳಲ್ಲಿ ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ | **14-09-2021 (ಬ್ಯಾಂಕ್ ವೇಳೆಯಲ್ಲಿ)** |
| ಪ್ರವೇಶ ಪತ್ರಗಳನ್ನು ಡೌನ್‌ಮಾಡಿಕೊಳ್ಳಲು | **11-10-2021 ಸಂಜೆ 4.00 ರಿಂದ** |

**ಸೂಚನೆ:**

- ಬ್ಯಾಂಕಿನಿಂದ ಶುಲ್ಕ ಪಾವತಿಸಿದ ಬಗ್ಗೆ ಖಚಿತ ಮಾಹಿತಿ ಬಂದ ನಂತರವೇ ಅಭ್ಯರ್ಥಿಗಳಿಗೆ ಪ್ರವೇಶ ಪತ್ರವನ್ನು ಡೌನ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು.
- ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಡಿಪ್ಲೊಮ ಸಿಇಟಿ-2021ಕ್ಕೆ ದಾಖಲಿಸಿದ ಎಲ್ಲಾ ಮಾಹಿತಿಗಳನ್ನು ಅಂತಿಮ ಎಂದು ಪರಿಗಣಿಸಲಾಗುತ್ತದೆ ಮತ್ತು ಈ ಮಾಹಿತಿಯೇ ಮುಂದಿನ ಎಲ್ಲಾ ಪ್ರಕ್ರಿಯೆಗಳಿಗೆ ಆಧಾರವಾಗಿರುತ್ತದೆ ಹಾಗೂ ಯಾವುದೇ ಕಾರಣಕ್ಕೂ ದಾಖಲಿಸಿದ ಮಾಹಿತಿಯನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.
- **ಡಿಪ್ಲೊಮಾ ಸಿಇಟಿ-2021 ರ ಅರ್ಜಿ ನಮೂನೆಯಲ್ಲಿ ಜಾತಿ / ವರ್ಗ ಮತ್ತು ವಾರ್ಷಿಕ ಆದಾಯದ ಬಗ್ಗೆ ಒದಗಿಸಿರುವ ಮಾಹಿತಿಯು ವಿದ್ಯಾರ್ಥಿಗಳಿಗೆ ರ್‍ಯಾಂಕ್ ನೀಡುವುದಕ್ಕೆ / ಸೀಟು ಆಯ್ಕೆ ಮಾಡುವುದಕ್ಕೆ ಪರಿಗಣಿಸಲಾಗುವುದು ಮತ್ತು ಯಾವುದೇ ಕಾರಣಕ್ಕೂ ಬದಲಾಯಿಸಲು ಅವಕಾಶವಿರುವುದಿಲ್ಲ.**

**2021 ರ ಡಿಪ್ಲೊಮಾ ಸಾಮಾನ್ಯ ಪ್ರವೇಶ ಪರೀಕ್ಷೆಯ ವೇಳಾಪಟ್ಟಿ**

| ದಿನಾಂಕ | ಸಮಯ | ವಿಷಯ | Marks |
|---|---|---|---|
| **23-10-2021 ಶನಿವಾರ** | ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ | ಸಂಬಂಧಿಸಿದ ವಿಷಯ | 180 |
| | ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ | ಕನ್ನಡ ಭಾಷಾ ಪರೀಕ್ಷೆ (ಬೆಂಗಳೂರಿನಲ್ಲಿ ಮಾತ್ರ) ಹೊರನಾಡು ಮತ್ತು ಗಡಿನಾಡು ಕನ್ನಡಿಗರಿಗೆ | 50 |

ವಿಶೇಷ ಸೂಚನೆ: ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಗೆ ಭೇಟಿ ನೀಡಲು ಸೂಚಿಸಿದೆ.

ಸಹಿ/-
(ಎಸ್. ರಮ್ಯ, ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ಬೆಂ.ಸ/ಜಾ/1357/2021-22

**ಕೋವಿಡ್-19, ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.**

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

12x20Cms